


Poster for the cancer awareness exhibition at Kadri Park, Mangaluru, on February 3, to be organised by KMC Hospital, Mangaluru.

# Unique exhibition, Yakshagana show on cancer awareness

MANGALURU: Ahead of World Cancer Day, KMC Hospital, Mangaluru, with an aim to motivate and create awareness on cancer among people, will organise an exhibition at Kadri Park on February 3.

This is a first-of-its-kind initiative and is in partnership with the Department of Haematology and Oncology, KMC Hospital, along with Lions Club Kadri Hills, Mangaluru; Indian Medical Association, Mangaluru; and Association of Medical Consultants, Mangaluru.

Deputy Commissioner Sasikanth Senthil will inaugurate the exhibition at 9.30 am, said Dr Prashanth, consultant haematologist.

"Awareness is the key when it comes to cancer as there are lots of myths associated with the deadly disease. In fact, fear is the first thing that comes to our minds with cancer. Early detection and treatment are the keys, besides making simple lifestyle changes," said Dr Prashanth.

There will be nearly 100 pictorial posters, explaining the basic information regarding cancer.

The programme will conclude with a Yakshagana performance on 'Arbudasura Garvabhanga' (Defeat of Demon Cancer).

The play is especially written and enacted by eminent doctors of Mangaluru who are also members of the Indian Medical Association.

The prasanga (story) is written by Sathyamurthy Aithal, a senior surgeon and amateur Yakshagana artiste, and Dr Annayya Kulal. The songs have been written by Nithyananda Karantha Polali.

Of the 22 characters, a majority of them will be performed by doctors, along with amateur Yakshagana artistes.

DH News Service

# ಫೆ. 3: ಕ್ಯಾನ್ಸರ್ ಮೆಗಾ ಜಾಗೃತಿ ಕಾರ್ಯಕ್ರಮ

**ಪತ್ರಿಕಾಭವನ,** ಜ. 29: ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ನಗರದ ಕೆಎಂಸಿ ಆಸ್ಪತ್ರೆಯ ರಕ್ತರೋಗ ಶಾಸ್ತ್ರ ಮತ್ತು ಕ್ಯಾನ್ಸರ್ ರೋಗಶಾಸ್ತ್ರ ವಿಭಾಗದ ವತಿಯಿಂದ ಕದ್ರಿಹಿಲ್ಸ್ ಲಯನ್ಸ್ ಕ್ಲಬ್, ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ ಮತ್ತು ಮಂಗಳೂರು ಅಸೋಸಿಯೇಶನ್ ಆಫ್ ಮೆಡಿಕಲ್ ಕನ್ಸಲ್ಟೆಂಟ್ಸ್ ಸಹಯೋಗದೊಂದಿಗೆ ಕ್ಯಾನ್ಸರ್ ಮೆಗಾ ಜಾಗೃತಿ ಕಾರ್ಯಕ್ರಮ ನಗರದ ಕದ್ರಿ ಪಾರ್ಕ್‌ನಲ್ಲಿ ಫೆ. 3ರಂದು ಜರಗಲಿದೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದ ಕೆಎಂಸಿ ಆಸ್ಪತ್ರೆಯ ರಕ್ತ ರೋಗಶಾಸ್ತ್ರ ಸಲಹ ತಜ್ಞ ಡಾ। ಪ್ರಶಾಂತ್, ಬೆಳಗ್ಗೆ 9.30ರಿಂದ ರಾತ್ರಿ 8 ಗಂಟೆ ಯವರೆಗೆ ಕಾರ್ಯಕ್ರಮ ಜರಗಲಿದೆ ಎಂದರು.

ಜನರಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಶೀಘ್ರ ಪತ್ತೆ, ಚಿಕಿತ್ಸೆ ಮತ್ತು ಜೀವನಶೈಲಿಯ ಮಾಹಿತಿ ಜನರಿಗೆ ತಲುಪುವ ನಿಟ್ಟಿನಲ್ಲಿ ಪೋಸ್ಟರ್‌ಗಳ ಪ್ರದರ್ಶನ ಮೂಲಕ ಜಾಗೃತಿ ಮೂಡಿಸಲಾಗುವುದು. ಸುಮಾರು 100 ಪೋಸ್ಟರ್‌ಗಳು ಪ್ರದರ್ಶನಗೊಳ್ಳಲಿದ್ದು ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ.

10.30ರಿಂದ 11.30ರ ವರೆಗೆ ಲಯನ್ಸ್ ಕದ್ರಿ ಹಿಲ್ ಸದಸ್ಯರಿಂದ ಮನೋರಂಜನ ಕಾರ್ಯಕ್ರಮ ನಡೆಯಲಿದೆ.

ಸಂಜೆ 6.30ಕ್ಕೆ ಕ್ಯಾನ್ಸರ್ ಬಗ್ಗೆ ಜನಜಾಗೃತಿಗಾಗಿ ವೈದ್ಯರುಗಳೇ ಸಾಹಿತ್ಯ ಬರೆದು, ಅಭಿನಯಿಸಿರುವ 'ಅರ್ಬುದಾಸುರ ಗರ್ವಭಂಗ' ಯಕ್ಷಗಾನ ಪ್ರದರ್ಶನಗೊಳ್ಳಲಿದೆ ಎಂದರು.

ಮಂಗಳೂರು ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ ಅಧ್ಯಕ್ಷ ಡಾ। ಸಚ್ಚಿದಾನಂದ ರೈ, ಕದ್ರಿ ಹಿಲ್ಸ್ ಲಯನ್ಸ್ ಕ್ಲಬ್ ಅಧ್ಯಕ್ಷೆ ಗೀತಾ, ಕೆಎಂಸಿ ಮಕ್ಕಳ ರಕ್ತಶಾಸ್ತ್ರಜ್ಞ ಡಾ। ಹರ್ಷಪ್ರಸಾದ್, ಮಂಗಳೂರು ಅಸೋಸಿಯೇಶನ್ ಆಫ್ ಮೆಡಿಕಲ್ ಕನ್ಸಲ್ಟೆಂಟ್ಸ್ ಕಾರ್ಯದರ್ಶಿ ಡಾ। ತಾಜುದ್ದೀನ್ ಉಪಸ್ಥಿತರಿದ್ದರು.

# ಫೆ.3ರಂದು ಕ್ಯಾನ್ಸರ್ ಜಾಗೃತಿ ಪ್ರದರ್ಶನ

ಮಂಗಳೂರು: 'ನಗರದ ಕೆಎಂಸಿ ಆಸ್ಪತ್ರೆ ಮತ್ತು ಲಯನ್ಸ್ ಮತ್ತು ಲಿಯೋ ಕ್ಲಬ್ ಕದ್ರಿ ಹಿಲ್ಸ್ ಜಂಟಿ ಆಶ್ರಯದಲ್ಲಿ ವಿಶ್ವ ಕ್ಯಾನ್ಸರ್ ವಿರೋಧಿ ದಿನದ ಅಂಗವಾಗಿ ಫೆ. 3ರಂದು ಬೆಳಿಗ್ಗೆ 9.30ಕ್ಕೆ ಕದ್ರಿ ಉದ್ಯಾನದಲ್ಲಿ ಬೃಹತ್ ಕ್ಯಾನ್ಸರ್ ಜಾಗೃತಿ ಪ್ರದರ್ಶನ ನಡೆಯಲಿದೆ' ಎಂದು ಕೆಎಂಸಿ ರಕ್ತಶಾಸ್ತ್ರ ತಜ್ಞ ಡಾ. ಪ್ರಶಾಂತ್ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಬಾರಿ ಕ್ಯಾನ್ಸರ್ ಜಾಗೃತಿಯ ಮಾಹಿತಿ ಇರುವ 100 ಪೋಸ್ಟರ್‌ಗಳನ್ನು ಪ್ರದರ್ಶಿಸಲಾಗುತ್ತದೆ. ಬೆಳಿಗ್ಗೆ 10.30 ರಿಂದ 11.30ರ ವರೆಗೆ ಲಯನ್ಸ್ ಕ್ಲಬ್ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಸಂಜೆ 6.30ಕ್ಕೆ ಸಮಾರೋಪ ನಡೆಯಲಿದೆ. ನಗರದ ಆದಾಯ ತೆರಿಗೆ ವಿಭಾಗದ ಮುಖ್ಯ ಆಯುಕ್ತ ನರೋತ್ತಮ ಮಿಶ್ರ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಕೆಎಂಸಿ ಆಸ್ಪತ್ರೆಯ ಕಲಾಸಕ್ತ ವೈದ್ಯರು ರಚಿಸಿ, ಅಭಿನಯಿಸಿರುವ ಕ್ಯಾನ್ಸರ್ ಕುರಿತ 'ಅರ್ಬುದಾಸುರ ಗರ್ವಭಂಗ' ಯಕ್ಷಗಾನ ನಡೆಯಲಿದೆ' ಎಂದು ತಿಳಿಸಿದರು.

ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ ಅಧ್ಯಕ್ಷ ಡಾ. ಸಚ್ಚಿದಾನಂದ ರೈ, ಲಯನ್ಸ್ ಕ್ಲಬ್ ಕದ್ರಿಯ ಗೀತಾ ರಾವ್, ಅಸೋಸಿಯೇಶನ್ ಆಫ್ ಮೆಡಿಕಲ್ ಕನ್ಸಲ್ಟೆಂಟ್ಸ್‌ನ ಡಾ. ಶಾಬುದ್ದೀನ್, ಕೆಎಂಸಿ ಡಾ. ಹರ್ಷ ಪ್ರಸಾದ್ ಇದ್ದರು.

# ಕ್ಯಾನ್ಸರ್ ಮೆಗಾ ಜಾಗೃತಿ ಪ್ರದರ್ಶನ

**ಮಂಗಳೂರು:** ನಗರದ ಕೆಎಂಸಿ ಆಸ್ಪತ್ರೆಯ ರಕ್ತರೋಗ ಶಾಸ್ತ್ರ ಮತ್ತು ಕ್ಯಾನ್ಸರ್ ರೋಗಶಾಸ್ತ್ರ ವಿಭಾಗವು ಕದ್ರಿ ಹಿಲ್ಸ್ ಲಯನ್ಸ್ ಕ್ಲಬ್ ಮಂಗಳೂರು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಮತ್ತು ಮಂಗಳೂರು ಅಸೋಸಿಯೇಷನ್ ಆಫ್ ಮೆಡಿಕಲ್ ಕನ್ಸಲ್ಟೆಂಟ್ಸ್ ಸಹಯೋಗದೊಂದಿಗೆ ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಕ್ಯಾನ್ಸರ್ ಮೆಗಾ ಜಾಗೃತಿ ಕಾರ್ಯಕ್ರಮ ನಗರದ ಕದ್ರಿ ಪಾರ್ಕ್‌ನಲ್ಲಿ ಫೆ.3ರಂದು ಬೆಳಗ್ಗೆ 9.30ರಿಂದ ರಾತ್ರಿ 8ರ ವರೆಗೆ ನಡೆಯಲಿದೆ ಎಂದು ಕೆಎಂಸಿ ಆಸ್ಪತ್ರೆಯ ರಕ್ತ ರೋಗಶಾಸ್ತ್ರ ಸಲಹಾತಜ್ಞ ಡಾ.ಪ್ರಶಾಂತ್ ತಿಳಿಸಿದರು.

ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ. ಶೀಘ್ರ ಪತ್ತೆ, ಚಿಕಿತ್ಸೆ ಮತ್ತು ಜೀವನಶೈಲಿಯ ಮಾಹಿತಿ ಜನರಿಗೆ ತಲುಪುವ ನಿಟ್ಟಿನಲ್ಲಿ ಪೋಸ್ಟರ್‌ಗಳ ಪ್ರದರ್ಶನ ಮೂಲಕ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಲಾಗಿದೆ. ಸುಮಾರು 100 ಪೋಸ್ಟರ್‌ಗಳು ಪ್ರದರ್ಶನಗೊಳ್ಳಲಿದ್ದು ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. ಬೆಳಗ್ಗೆ 10.30ರಿಂದ 11.30ರವರೆಗೆ ಲಯನ್ಸ್ ಕದ್ರಿಹಿಲ್ ಸದಸ್ಯರಿಂದ ಮನೋರಂಜನಾ ಕಾರ್ಯಕ್ರಮ, ಸಂಜೆ 6.30ಕ್ಕೆ ಕ್ಯಾನ್ಸರ್ ಬಗ್ಗೆ ಜನಜಾಗೃತಿಗಾಗಿ ವೈದ್ಯರುಗಳೇ ಸಾಹಿತ್ಯ ಬರೆದು; ಅಭಿನಯಿಸಿರುವ 'ಅರ್ಬುದಾಸುರ ಗರ್ವಭಂಗ' ಯಕ್ಷಗಾನ ಪ್ರದರ್ಶನಗೊಳ್ಳಲಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಮಂಗಳೂರು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಅಧ್ಯಕ್ಷ ಡಾ.ಸಚ್ಚಿದಾನಂದ ರೈ, ಮಂಗಳೂರು ಕದ್ರಿ ಹಿಲ್ಸ್ ಲಯನ್ಸ್ ಕ್ಲಬ್‌ನ ಅಧ್ಯಕ್ಷೆ ಲಯನ್ಸ್ ಗೀತಾ, ಕೆಎಂಸಿ ಮಕ್ಕಳ ರಕ್ತಶಾಸ್ತ್ರಜ್ಞ ಡಾ.ಹರ್ಷಪ್ರಸಾದ್ ಮತ್ತು ಮಂಗಳೂರು ಅಸೋಸಿಯೇಷನ್ ಆಫ್ ಮೆಡಿಕಲ್ ಕನ್ಸಲ್ಟೆಂಟ್ಸ್ ಕಾರ್ಯದರ್ಶಿ ಡಾ.ತಾಜುದ್ದೀನ್ ಉಪಸ್ಥಿತರಿದ್ದರು.

# ಕ್ಯಾನ್ಸರ್ ಮೆಗಾ ಜಾಗೃತಿ

ಮಂಗಳೂರು: ವಿಶ್ವ ಕ್ಯಾನ್ಸರ್ ದಿನ ಅಂಗವಾಗಿ ಕ್ಯಾನ್ಸರ್ ಮೆಗಾ ಜಾಗೃತಿ ಕಾರ್ಯಕ್ರಮ ನಗರದ ಕದ್ರಿ ಪಾರ್ಕ್‌ನಲ್ಲಿ ಫೆ.3ರಂದು ಬೆಳಗ್ಗೆ 9.30ರಿಂದ ರಾತ್ರಿ 8ರವರೆಗೆ ನಡೆಯಲಿದೆ. ಕೆಎಂಸಿ ಆಸ್ಪತ್ರೆ ರಕ್ತರೋಗ ಶಾಸ್ತ್ರ ಮತ್ತು ಕ್ಯಾನ್ಸರ್ ರೋಗಶಾಸ್ತ್ರ ವಿಭಾಗ ಕದ್ರಿ ಹಿಲ್ಸ್ ಲಯನ್ಸ್ ಕ್ಲಬ್ ಮಂಗಳೂರು ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ ಮತ್ತು ಮಂಗಳೂರು ಅಸೋಸಿಯೇಶನ್ ಆಫ್ ಮೆಡಿಕಲ್ ಕನ್ಸಲ್ಟೆಂಟ್ಸ್ ಸಹಯೋಗದೊಂದಿಗೆ ಜಾಗೃತಿ ನಡೆಯಲಿದೆ ಎಂದು ಕೆಎಂಸಿ ಆಸ್ಪತ್ರೆ ರಕ್ತ ರೋಗಶಾಸ್ತ್ರ ಸಲಹಾತಜ್ಞ ಡಾ.ಪ್ರಶಾಂತ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಡಾ.ಸಚ್ಚಿದಾನಂದ ರೈ, ಮಂಗಳೂರು ಕದ್ರಿ ಹಿಲ್ಸ್ ಲಯನ್ಸ್ ಕ್ಲಬ್ ಅಧ್ಯಕ್ಷೆ ಲಯನ್ಸ್ ಗೀತಾ, ಕೆಎಂಸಿ ಮಕ್ಕಳ ರಕ್ತಶಾಸ್ತ್ರಜ್ಞ ಡಾ.ಹರ್ಷಪ್ರಸಾದ್ ಮತ್ತು ಮಂಗಳೂರು ಅಸೋಸಿಯೇಶನ್ ಆಫ್ ಮೆಡಿಕಲ್ ಕನ್ಸಲ್ಟೆಂಟ್ಸ್ ಕಾರ್ಯದರ್ಶಿ ಡಾ.ತಾಜುದ್ದೀನ್ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಫೆ. 3ರಂದು ಕ್ಯಾನ್ಸರ್ ಮೆಗಾ ಜಾಗೃತಿ ಕಾರ್ಯಕ್ರಮ

ಮಂಗಳೂರು: ನಗರದ ಕೆಎಂಸಿ ಆಸ್ಪತ್ರೆಯ ರಕ್ತರೋಗ ಶಾಸ್ತ್ರ ಮತ್ತು ಕ್ಯಾನ್ಸರ್ ರೋಗಶಾಸ್ತ್ರ ವಿಭಾಗವು ಕದ್ರಿ ಹಿಲ್ಸ್ ಲಯನ್ಸ್ ಕ್ಲಬ್ ಮಂಗಳೂರು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಮತ್ತು ಮಂಗಳೂರು ಅಸೋಸಿಯೇಷನ್ ಆಫ್ ಮೆಡಿಕಲ್ ಕನ್ಸಲ್ಟೆಂಟ್ಸ್ ಸಹಯೋಗದೊಂದಿಗೆ ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಕ್ಯಾನ್ಸರ್ ಮೆಗಾ ಜಾಗೃತಿ ಕಾರ್ಯಕ್ರಮ ನಗರದ ಕದ್ರಿ ಪಾರ್ಕ್‌ನಲ್ಲಿ ಫೆ.3ರಂದು ಬೆಳಗ್ಗೆ 9.30ರಿಂದ ರಾತ್ರಿ 8 ಗಂಟೆಯವರೆಗೆ ನಡೆಯಲಿದೆ.

ಜನರಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ. ಶೀಘ್ರ ಪತ್ತೆ, ಚಿಕಿತ್ಸೆ ಮತ್ತು ಜೀವನಶೈಲಿಯ ಮಾಹಿತಿ ಜನರಿಗೆ ತಲುಪುವ ನಿಟ್ಟಿನಲ್ಲಿ ಪೋಸ್ಟರ್‌ಗಳ ಪ್ರದರ್ಶನ ಮೂಲಕ ಜಾಗೃತಿ ಮೂಡಿಸುವ ಗುರಿ ಹೊಂದಲಾಗಿದೆ ಎಂದು ಕೆಎಂಸಿ ಆಸ್ಪತ್ರೆಯ ರಕ್ತ ರೋಗಶಾಸ್ತ್ರ ಸಲಹಾತಜ್ಞ ಡಾ. ಪ್ರಶಾಂತ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುಮಾರು 100 ಪೋಸ್ಟರ್‌ಗಳು ಪ್ರದರ್ಶನಗೊಳ್ಳಲಿದ್ದು ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. ಬೆಳಗ್ಗೆ 10.30ರಿಂದ 11.30ರವರೆಗೆ ಲಯನ್ಸ್ ಕದ್ರಿ ಹಿಲ್ ಸದಸ್ಯರಿಂದ ಮನೋರಂಜನಾ ಕಾರ್ಯಕ್ರಮ ನಡೆಯಲಿದೆ. ಸಂಜೆ 6.30ಕ್ಕೆ ಕ್ಯಾನ್ಸರ್ ಬಗ್ಗೆ ಜನಜಾಗೃತಿಗಾಗಿ ವೈದ್ಯರುಗಳೇ ಸಾಹಿತ್ಯ ಬರೆದು, ಅಭಿನಯಿಸಲಿರುವ 'ಅರ್ಬುದಾಸುರ ಗರ್ವಭಂಗ' ಯಕ್ಷಗಾನ ಪ್ರದರ್ಶನಗೊಳ್ಳಲಿದೆ ಎಂದರು.

ಮಂಗಳೂರು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಅಧ್ಯಕ್ಷ ಡಾ. ಸಚ್ಚಿದಾನಂದ ರೈ, ಮಂಗಳೂರು ಕದ್ರಿ ಹಿಲ್ಸ್ ಲಯನ್ಸ್ ಕ್ಲಬ್‌ನ ಅಧ್ಯಕ್ಷೆ ಗೀತಾ, ಕೆಎಂಸಿ ಮಕ್ಕಳ ರಕ್ತಶಾಸ್ತ್ರಜ್ಞ ಡಾ. ಹರ್ಷಪ್ರಸಾದ್ ಮತ್ತು ಮಂಗಳೂರು ಅಸೋಸಿಯೇಷನ್ ಆಫ್ ಮೆಡಿಕಲ್ ಕನ್ಸಲ್ಟೆಂಟ್ಸ್ ಕಾರ್ಯದರ್ಶಿ ಡಾ. ತಾಜುದ್ದೀನ್ ಉಪಸ್ಥಿತರಿದ್ದರು.